ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ:06-08-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ರಾಷ್ಟ್ರೀಯ ಕೈಮಗ್ಗ ದಿನಾಚರಣೆ – 2016: ರಾಜ್ಯ ಮಟ್ಟದ ಕೈಮಗ್ಗ ಮೇಳ ಉದ್ಘಾಟನಾ ಸಮಾರಂಭ.<br><br>ಉದ್ಘಾಟನೆ:<br><br>ರುದ್ರಪ್ಪ ಮಾನಪ್ಪ ಲಮಾಣಿ.<br>ಜವಳಿ ಮತ್ತು ಮುಜರಾಯಿ ರಾಜ್ಯ ಸಚಿವರು<br><br>ಅಧ್ಯಕ್ಷತೆ:<br><br>ಆರ್. ರೋಷನ್ ಬೇಗ್,<br>ನಗರಾಭಿವೃದ್ಧಿ ಹಾಗೂ ಹಜ್ ಸಚಿವರು.33 | 07-08-2015<br>ಭಾನುವಾರ<br>ಸಂಜೆ<br>4-00 ಗಂಟೆಗೆ | ಚಿತ್ರಕಲಾ ಪರಿಷತ್,<br>ಕುಮಾರಕೃಪ ರಸ್ತೆ,<br>ಬೆಂಗಳೂರು. |
| 2. | ಬೆಳ್ಳಿಹೆಜ್ಜೆಯಲ್ಲಿ ಚತುರ್ಭಾಷಾ ತಾರೆ ಶ್ರೀಮತಿ ಲಕ್ಷ್ಮೀ.<br><br>ಮುಖ್ಯ ಅತಿಥಿಗಳು:<br><br>ಪುನೀತ್ ರಾಜ್‌ಕುಮಾರ್,<br>ಖ್ಯಾತ ಚಲನಚಿತ್ರ ನಟರು.<br><br>ಎನ್.ಆರ್. ವಿಶುಕುಮಾರ್,<br>ನಿರ್ದೇಶಕರು,<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ<br><br>ಸಾ.ರಾ. ಗೋವಿಂದು, | 07-08-2015<br>ಭಾನುವಾರ<br>ಸಂಜೆ<br>5-00 ಗಂಟೆಗೆ | ಮಹದೇವ ದೇಸಾಯಿ ಸಭಾಂಗಣ,<br>ಗಾಂಧಿ ಭವನ,<br>ಕುಮಾರ ಪಾರ್ಕ್ ರಸ್ತೆ,<br>ಬೆಂಗಳೂರು. |

| | | | |
|---|---|---|---|
| | ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ<br><br>ಎಸ್. ಕೆ. ಭಗವಾನ್,<br>ಚಲನಚಿತ್ರ ನಿರ್ದೇಶಕರು<br><br>ಜೈ. ಜಗದೀಶ್,<br>ಚಲನಚಿತ್ರ ನಟರು<br><br>ಅಧ್ಯಕ್ಷತೆ:<br><br>ಎಸ್. ವಿ. ರಾಜೇಂದ್ರಸಿಂಗ್ ಬಾಬು,<br>ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ಅಕಾಡೆಮಿ | | |
| 3. | ಮಾಜಿ ಮುಖ್ಯಮಂತ್ರಿ ದಿವಂಗತ ನಿಜಲಿಂಗಪ್ಪನವರ 16ನೇ ಪುಣ್ಯತಿಥಿ :<br><br>ಮಾಲಾರ್ಪಣೆ:<br><br>ಆರ್. ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು | 08-08-2015<br>ಸೋಮವಾರ<br>ಬೆಳಿಗ್ಗೆ<br>10-00 ಗಂಟೆಗೆ | ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಕ್ರೀಡಾಪಟುಗಳಿಗೆ ಶುಭಾಶಯಗಳು

ಬೆಂಗಳೂರು, ಆಗಸ್ಟ್ 6 (ಕರ್ನಾಟಕ ವಾರ್ತೆ)

ಮುಖ್ಯಮಂತ್ರಿಯವರ ಸಂಸದೀಯ ಕಾರ್ಯದರ್ಶಿ ಹಾಗೂ ಕರ್ನಾಟಕ ಒಲಂಪಿಕ್ ಸಂಸ್ಥೆಯ ಅಧ್ಯಕ್ಷರಾದ ಕೆ. ಗೋವಿಂದರಾಜ್ ಅವರು ಬ್ರೆಸಿಲ್ ದೇಶದ ರಿಯೋದ್‌ನಲ್ಲಿ ನಡೆಯುವ 31ನೇ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಲು ತೆರಳಿರುವ ಭಾರತದ ಕ್ರೀಡಾಪಟುಗಳಿಗೆ, ವಿಶೇಷವಾಗಿ ಕರ್ನಾಟಕ ರಾಜ್ಯ ಕ್ರೀಡಾಪಟುಗಳಿಗೆ ಹಾರ್ದಿಕ ಶುಭಾಶಯಗಳನ್ನು ಕೋರಿದ್ದಾರೆ.

ಬಾಬು:ಜಿಪಿಆರ್.

# ಕಲಾ ಶಿಬಿರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 6 (ಕರ್ನಾಟಕ ವಾರ್ತೆ)

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ 2016-17 ನೇ ಸಾಲಿನಲ್ಲಿ ಯಕ್ಷಗಾನ ಮತ್ತು ಬಯಲಾಟ ಕಲೆಯನ್ನು ಉತ್ತೇಜಿಸುವ ದೃಷ್ಟಿಯಿಂದ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಅಭ್ಯರ್ಥಿಗಳಿಗೆ ನುರಿತ ಗುರುಗಳಿಂದ ಕಲಾ ಶಿಬಿರವನ್ನು ಏರ್ಪಡಿಸಲಾಗುವುದು.

ಯಕ್ಷಗಾನ (ತೆಂಕುತಿಟ್ಟು, ಬಡಗುತಿಟ್ಟು), ಬಯಲಾಟ (ಮೂಡಲಪಾಯ ಯಕ್ಷಗಾನ, ದೊಡ್ಡಾಟ, ಬಯಲಾಟ) ಸಣ್ಣಾಟ, ಶ್ರೀಕೃಷ್ಣಪಾರಿಜಾತ, ತೊಗಲುಗೊಂಬೆಯಾಟ, ಸೂತ್ರದ ಗೊಂಬೆಯಾಟ, ಘಟ್ಟದಕೋರೆ ಇತ್ಯಾದಿ ಕಲಾಪ್ರಕಾರಗಳಲ್ಲಿ ಸಾಧನೆ ಮಾಡಿರುವ ಹಿರಿಯ ಗುರುಗಳು 12 ವರ್ಷದಿಂದ ಹಾಗೂ ಮೇಲ್ಪಟ್ಟ ಅಭ್ಯರ್ಥಿಗಳಿಗೆ (10 ರಿಂದ 15 ಮಂದಿ) ಅಭ್ಯರ್ಥಿಗಳಿಗೆ ಯಕ್ಷಗಾನ ಬಯಲಾಟ ಕಲೆಯಲ್ಲಿ ತರಬೇತಿ ನೀಡಲು ಆಸಕ್ತಿ ಇದ್ದಲ್ಲಿ ತಾವು ಮಾಡಿರುವ ಸಾಧನೆಯ ವಿವರದೊಂದಿಗೆ, ತಾವು ತರಬೇತಿ ನೀಡಲು ಬಯಸುವ ಅಭ್ಯರ್ಥಿಗಳ ವಿವರದೊಂದಿಗೆ, (ಹೆಸರು, ವಿಳಾಸ, ದೂರವಾಣಿ/ಮೊಬೈಲ್ ಇತ್ಯಾದಿ ವಿವರದೊಂದಿಗೆ) ಗುರುಗಳು ಹಾಗೂ ಅಭ್ಯರ್ಥಿಗಳು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ಜಾತಿ ಪ್ರಮಾನ ಪತ್ರವನ್ನು ಕಡ್ಡಾಯವಾಗಿ ಆಗಸ್ಟ್ 16 ರೊಳಗಾಗಿ ನಿಗದಿತ ಅರ್ಜಿ ನಮುನೆಯಲ್ಲಿ ಮಾಹಿತಿಗಳನ್ನು ಭರ್ತಿಮಾಡಿ ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಚಾಲುಕ್ಯ ವಿಭಾಗ, ಜೆ.ಸಿ. ರಸ್ತೆ, ಬೆಂಗಳೂರು – 2 ದೂರವಾಣಿ 080-22113146) ಇಲ್ಲಿಗೆ ಕಳುಹಿಸಿಕೊಡತಕ್ಕದ್ದು.

ಬಾಬು:ಜಿಪಿಆರ್.

# ಸಚಿವರ ಪ್ರವಾಸ

ಬೆಂಗಳೂರು, ಆಗಸ್ಟ್ 6 (ಕರ್ನಾಟಕ ವಾರ್ತೆ)

ಕಂದಾಯ ಸಚಿವ ಕಾಗೋಡು ತಿಮ್ಮಪ್ಪನವರು ಆಗಸ್ಟ್ 11 ರಿಂದ 16 ರವರೆಗೆ ಧಾರವಾಡ, ವಿಜಯಪುರ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಬೆಳಗಾವಿ, ಬಾಗಲಕೋಟೆ, ಗದಗ, ಹಾವೇರಿ, ಉಡುಪಿ ಹಾಗೂ ಮಂಗಳೂರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು, ಆಗಸ್ಟ್ 16 ರಂದು ನಗರಕ್ಕೆ ಹಿಂದಿರುಗಲಿದ್ದಾರೆ.

ಪೂರ್ಣಿಮಾ:ಜಿಪಿಆರ್.

## ಶಿಕ್ಷಕರ ಮಕ್ಕಳ ಧನಸಹಾಯಕ್ಕೆ ಅಗತ್ಯ ದಾಖಲೆ ಸಲ್ಲಿಸಲು ಸೂಚನೆ

ಬೆಂಗಳೂರು, ಆಗಸ್ಟ್ 6 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ವತಿಯಿಂದ ಬಿಇ, ಎಂ.ಬಿ.ಬಿ.ಎಸ್, ಡಿಪ್ಲೋಮಾ ಕೋರ್ಸ್‌ಗಳಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಕಾರ್ಯನಿರತ ಶಿಕ್ಷಕರ ಮಕ್ಕಳಿಗೆ ವಾರ್ಷಿಕ ಧನ ಸಹಾಯಕ್ಕಾಗಿ ಈಗಾಗಲೇ 101 ಅರ್ಜಿಗಳನ್ನು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ನವದೆಹಲಿ ಇವರಿಗೆ ಮಂಜೂರಾತಿಗಾಗಿ ಕಳುಹಿಸಲಾಗಿತ್ತು.

ಆದರೆ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ನವದೆಹಲಿ ಇವರು ಹೆಚ್ಚಿನ ಧನಸಹಾಯ ಕೋರಿ ಸಲ್ಲಿಸುವ ಅರ್ಜಿಗಳ ಸಂಖ್ಯೆಯನ್ನು ಮತ್ತು ಅರ್ಜಿಯನ್ನು ಪರಿಷ್ಕರಿಸಿ ಗರಿಷ್ಠ 400 ಅರ್ಜಿಗಳನ್ನು ಸಲ್ಲಿಸುವಂತೆ ಸೂಚಿಸಿರುವುದರಿಂದ ಈಗಾಗಲೇ 2013-14 ನೇ ಸಾಲಿನಲ್ಲಿ ಧನಸಹಾಯ ಕೋರಿ ಅರ್ಜಿ ಸಲ್ಲಿಸಿರುವ ಶಿಕ್ಷಕರು ಮಾತ್ರ ಮೂಲ ಭೋಧನಾ ಶುಲ್ಕ, ಗ್ರಂಥಾಲಯ ಶುಲ್ಕ, ಲ್ಯಾಬೋರೇಟರಿ ಶುಲ್ಕ ಪಾವತಿಸಿದ ಮೂಲ ರಶೀದಿ ಮತ್ತು ಧೃಡೀಕೃತ ಅಜೀವ ಸದಸ್ಯತ್ವದ ಕಾರ್ಡ್‌ನೊಂದಿಗೆ ಆಗಸ್ಟ್ 31 ರ ಒಳಗೆ ಸಹ ನಿರ್ದೇಶಕರು, ಪ್ರಭಾರಾಧಿಕಾರಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ಈ ವಿಳಾಸಕ್ಕೆ ಸಲ್ಲಿಸಬೇಕು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ **www.schooleducation.kar.nic.in** ಸಂಪರ್ಕಿಸಬಹುದು.

ಪೂರ್ಣಿಮಾ:ಜಿಪಿಆರ್.

## ನವಸಾಕ್ಷರರಿಗೆ ಮೌಲ್ಯಮಾಪನ ಪರೀಕ್ಷೆ

ಬೆಂಗಳೂರು, ಆಗಸ್ಟ್ 6 (ಕರ್ನಾಟಕ ವಾರ್ತೆ)

ಸಾಕ್ಷರ ಭಾರತ್ ಕಾರ್ಯಕ್ರಮದಡಿ ಸಾಕ್ಷರತೆಯನ್ನು ಹೊಂದಿರುವ ನವಸಾಕ್ಷರರಿಗೆ ಆಗಸ್ಟ್ 28 ರಂದು NLMA ಮತ್ತು NIOS ನವದೆಹಲಿ ಇವರ ಸಹಯೋಗದಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮ ಇರುವ ರಾಜ್ಯದ 19 ಜಿಲ್ಲೆಗಳಲ್ಲಿ ಮೌಲ್ಯಮಾಪನ ಪರೀಕ್ಷೆ ನಡೆಯಲಿದೆ.

ಅಂದು ಬಾಗಲಕೋಟೆ, ವಿಜಯಪುರ, ಬೆಂಗಳುರು ಗ್ರಾಮಾಂತರ, ಬೆಳಗಾವಿ/ಚಿಕ್ಕೊಡಿ, ಬಳ್ಳಾರಿ, ಬೀದರ್, ಚಾಮರಾಜನಗರ, ಚಿತ್ರದುರ್ಗ, ಗದಗ, ಕೋಲಾರ, ಕೊಪ್ಪಳ, ಮಂಡ್ಯ, ರಾಯಚೂರು, ತುಮಕೂರು/ಮಧುಗಿರಿ, ಕಲಬುರಗಿ, ಯಾದಗಿರಿ, ಮೈಸೂರು, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಒಟ್ಟು 2443 ಗ್ರಾಮ ಪಂಚಾಯಿತಿಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮ ಹಾಗೂ ಸಂಸದರ ಆದರ್ಶ ಗ್ರಾಮ ಯೋಜನೆಯಡಿ ಆಯ್ದ 25 ಗ್ರಾಮ

ಪಂಚಾಯಿತಿಗಳಲ್ಲಿ ಕಲಿತವರಿಗೆ ಮೌಲ್ಯಮಾಪನ ಪರೀಕ್ಷೆಯನ್ನು ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರವು ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿಗಳ ಮುಲಕ ಸದರಿ ಪರೀಕ್ಷೆ ನಡೆಸುತ್ತದೆ.

. ಲೋಕ ಶಿಕ್ಷಣ ಕೇಂದ್ರದ ಪ್ರೇರಕರು ಗ್ರಾಮ ಪಂಚಾಯಿತಿಗಳಲ್ಲಿ ಅಭ್ಯರ್ಥಿಗಳ ನೋಂದಣಿ ಮಾಡುವರು. ಪರೀಕ್ಷೆಯ ದಿನದವರೆಗೆ ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. 2443 ಗ್ರಾಮ ಪಂಚಾಯಿತಿಗಳ ಕೇಂದ್ರ ಸ್ಥಳ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆವರೆಗೆ ನಡೆಯಲಿರುವ ಮೌಲ್ಯಮಾಪನ ಪರೀಕ್ಷೆಗೆ ಅಭ್ಯರ್ಥಿಗಳು ತಮಗೆ ಅನುಕೂಲವಾದ 3 ಗಂಟೆಗಳ ಕಾಲ ಪರೀಕ್ಷೆ ಬರೆಯಬಹುದು.

ಎ ಮತ್ತು ಬಿ ದರ್ಜೆ ಪಡೆದ ಅಭ್ಯರ್ಥಿಗಳು ಕಲಿಕೆ ಪೂರ್ಣಗೊಳಿಸಿದ್ದಾರೆಂದು ಪರಿಗಣಿಸಲಾಗುತ್ತದೆ. ಯಾವುದಾದರೂ ವಿಭಾಗದಲ್ಲಿ ಸಿ ದರ್ಜೆ ಪಡೆದ ಅಭ್ಯರ್ಥಿಗಳು ಆ ವಿಭಾಗದಲ್ಲಿ ಮಾತ್ರ ಪುನ: ಪರೀಕ್ಷೆ ತೆಗೆದುಕೊಳ್ಳಬಹುದು. ಪರೀಕ್ಷೆಯ ನಂತರ ಅರ್ಹ ಅಭ್ಯರ್ಥಿಗಳಿಗೆ NLMA ಮತ್ತು NIOS ಸಂಸ್ಥೆಯವರು ಜಂಟಿಯಾಗಿ ಪ್ರಮಾಣ ಪತ್ರ ನೀಡುವರು ಎಂದು ಲೋಕ ಶಿಕ್ಷಣ ನಿರ್ದೇಶನಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಪೂರ್ಣಿಮಾ:ಜಿಪಿಆರ್.

# ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ

ಬೆಂಗಳೂರು, ಆಗಸ್ಟ್ 6 (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ:07–08–2016ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಉದಯರಾಗ**" ಎಂಬ ಶೀರ್ಷಿಕೆಯಡಿ ಎಸ್. ಭಾರತಿ ಮತ್ತು ತಂಡ, ಬೆಂಗಳೂರು ರವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2) ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಸಂಧ್ಯಾರಾಗ**" ಎಂಬ ಶೀರ್ಷಿಕೆಯಡಿ ಶ್ರೀ.ಕೆ.ಹೆಚ್. ಕುಮಾರ್ ಮತ್ತು ತಂಡ, ಚೆನ್ನಪಟ್ಟಣ ತಾಲ್ಲೂಕು ರವರಿಂದ ಜಾನಪದ ಗೀತೆಗಳ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
3) ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
4) ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ (ರಿ), ಲಾಲ್‌ಬಾಗ್, ಬೆಂಗಳೂರುರವರು ತಮ್ಮ ಮಾರಾಟ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ವಿವಿಧ ರೀತಿಯ ಹಣ್ಣುಗಳು ಮತ್ತು ಹಣ್ಣಿನ ಜ್ಯೂಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
5) ಉದ್ಯಾನವನದ ಆವರಣದಲ್ಲಿ ಹಾಪ್‌ಕಾಮ್ಸ್, ಬೆಂಗಳೂರುರವರು ವಿವಿಧ Cut Fruits, Dry Fruits ಮತ್ತು ವಿವಿಧ ತಾಜಾ ಹಣ್ಣುಗಳು, ಪ್ಯಾಕ್ ಮಾಡಿದ ತಾಜಾ ತರಕಾರಿಗಳು ಹಾಗೂ ಹಣ್ಣಿನ ಜ್ಯೂಸ್‌ಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
6) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:**

**I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- **ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ವಿದ್ವಾನ್ ದಿವ್ಯ ಪ್ರಸಾದ್ ಇವರಿಂದ ಭರತನಾಟ್ಯ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

- ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ ಕರ್ನಾಟಕ ರಾಜ್ಯ ಪೋಲೀಸ್ ಶಸಸ್ತ್ರ ಪಡೆಯ 3ನೇ ಬೆಟಾಲಿಯನ್ ರವರಿಂದ ಪೋಲೀಸ್ ಬ್ಯಾಂಡ್ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 09.00 ಗಂಟೆಯಿಂದ 10.00 ಗಂಟೆಯವರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಾಲಭವನ ಸೊಸೈಟಿ, ಬೆಂಗಳೂರುರವರ ಸಹಯೋಗದೊಂದಿಗೆ ಸಂಭ್ರಮ ಸೌರಭ ಸಂಸ್ಥೆಯ ಕಲಾವಿದರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ
- ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ಶ್ರೀ ವಾಣಿ ವಿದ್ಯಾ ಕೇಂದ್ರ, ರಾಜಾಜಿನಗರ, ಬೆಂಗಳೂರು ಶಾಲಾ ವಿದ್ಯಾರ್ಥಿಗಳಿಂದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ**

- ಬೆಳಿಗ್ಗೆ 7.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಕರ್ನಾಟಕ ಗೃಹಮಂಡಳಿ (KHB) ರವರು ನಿರ್ಮಿಸಿರುವ ಮನೆಗಳು/ಸಮುಚ್ಛಯಗಳ ಕುರಿತು ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿಸುವ ಕಾರ್ಯಕ್ರಮವನ್ನು ಏರ್ಪಡಿಲಾಗಿದೆ.
- ಬೆಳಿಗ್ಗೆ 6.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ವಿದ್ಯಾರಣ್ಯ ಸಂಸ್ಥೆಯ ವತಿಯಿಂದ ಗ್ರಾಮೀಣ ಕ್ರೀಡೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

## Dak Adalat

**Bangalore, August 6 (Karnataka Information)**

**The Chief Postmaster General, Karnataka Postal Circle No.1 Beaulieu, Palace Road (opposite Maharani's College of Science) Bengaluru -560 001 will conduct a "DAK ADALAT" for redressal of public grievances relating to Postal Services on 29th August 2016 at 15.00 hours. Members of the public and esteemed customers of Department of Posts in Bengaluru Region may**

**address their grievances if any, to The Assistant Director (Postal Operations) O/o Chief Postmaster General, Karnataka Circle, Bengaluru 560 001, so as to reach the officer latest by 19th August 2016. Grievances can also be sent by e mail to tech.ka@indiapost.gov.in/karcopo@gmail.com, It is requested that brief and specific details with relevant facts and figure may please be furnished along with complete contact details to facilitate speedy redressal.**